ಅದರಲ್ಲಿದ್ದ ಕಾಣಿಕೆಗಳನ್ನೆಲ್ಲ ಒಂದು ದೊಡ್ಡ ಅಲ್ಯೂಮಿನಿಯಂ ಪಾತ್ರೆಗೆ ಸುರುವಿದರು. ಬಹುತೇಕ 1, 2, 5 ಮತ್ತು 10 ರೂಪಾಯಿ ನಾಣ್ಯಗಳು. ಹಲವು 10 ಮತ್ತು 20 ರೂಪಾಯಿಯ ನೋಟುಗಳು. ಕೆಲವೇ ಕೆಲವು 50 ಮತ್ತು 100 ರೂಪಾಯಿಯ ನೋಟುಗಳೂ ಇದ್ದವು. ಅವೆಲ್ಲವುಗಳ ಮಧ್ಯದಲ್ಲಿ ಒಂದು ಪುಟ್ಟ ಅರಿವೆಯ ಚೀಲವಿತ್ತು. ಅರ್ಚಕರು ಅದನ್ನು ಹೊರತೆಗೆದು, ಚೀಲಕ್ಕೆ ಹಾಕಿದ್ದ ಗಂಟನ್ನು ಸಡಿಲಿಸಿ, ಚೀಲದ ಒಳಗಿದ್ದ ಚಿನ್ನದ ಸರವನ್ನು ತಮ್ಮ ಎಡ ಅಂಗೈನ ಮೇಲೆ ಹಾಕಿಕೊಂಡರು. ಆ ಸರವನ್ನು ನೋಡುತ್ತಲೇ, ನಮ್ಮ ಜೊತೆ ಬಂದಿದ್ದ ದಂಪತಿಯ ಮುಖ ಸಂತೋಷದಿಂದ ಅರಳಿತು!

ಅವಲಕ್ಕಿಸರದ ಕೊಂಡಿಯ ಎರಡೂ ಬದಿಗಳಲ್ಲಿ ಇದ್ದ ಬಿಲ್ಲೆಗಳ ಮೇಲೆ ಆ ದಂಪತಿ ಹೇಳಿದ ಹೆಸರಿನ ಗುರುತು ಇರುವುದನ್ನು ಖಚಿತಪಡಿಸಿಕೊಂಡ ನಂತರ, ಅರ್ಚಕರು ಎಲ್ಲರ ಸಮ್ಮುಖದಲ್ಲಿ ಆ ಸರವನ್ನು ದಂಪತಿಯ ಕೈಗೆ ಹಸ್ತಾಂತರಿಸಿದರು. ನನ್ನ ಬಳಿ ಇದ್ದ ರಸೀದಿಯನ್ನು ಇಸಿದುಕೊಂಡು, ಸರವನ್ನು ನನ್ನ ಇಚ್ಛೆಯ ಮೇರೆಗೆ ಅದರ ವಾರಸುದಾರರಿಗೆ ದೇವಸ್ಥಾನದ ಆಡಳಿತಮಂಡಳಿಯು ಹಸ್ತಾಂತರಿಸಿದೆ ಎಂಬ ವಿವರಣೆಯುಳ್ಳ ಪತ್ರದ ಮೇಲೆ ನನ್ನ ಸಹಿ ಪಡೆದರು. ಕಳೆದುಹೋದ ತಮ್ಮ ಸರವು ಮರಳಿ ಸಿಗುವಂತೆ ಮಾಡಿದ ಆ ಪವನಪುತ್ರ ಆಂಜನೇಯನಿಗೆ ದಂಪತಿ ಹತ್ತುಸಾವಿರ ರೂಪಾಯಿ ಕಾಣಿಕೆ ಸಲ್ಲಿಸಿದರು.

''ಸದ್ಯಕ್ಕೆ ಎಲ್ಲಾ ಸುಸೂತ್ರವಾಗಿ ಮುಗಿಯಿತಲ್ಲ...'' ಬೈಕಿನಲ್ಲಿ ಮನೆಗೆ ಮರಳುವಾಗ ಮಾಲಾ ನಿಟ್ಟುಸುರಿಡುತ್ತಾ ಹೇಳಿದಳು.

''ಹೌದು, ನಿನ್ನೆ ರಾತ್ರಿಯೆಲ್ಲಾ ನನ್ನ ಮನಸಿನಲ್ಲಿ ಏನೋ ಒಂದು ಥರ ಚಡಪಡಿಕೆ. ಈಗ ಹೋಗಿ ಊಟ ಮಾಡಿ ನೆಮ್ಮದಿಯಾಗಿ ಮಲಗುತ್ತೇನೆ.'' ಮಾಲಾಳ ಮಾತಿಗೆ ಸಮ್ಮತಿ ಸೂಚಿಸಿದೆ.

''ರೀ... ಒಂದು ನಿಮಿಷ ಬೈಕ್ ನಿಲ್ಲಿಸಿ!!'' ಎಂದು ಮಾಲಾ ಕಿರುಚಿದಳು. ಬೈಕ್ ನಿಲ್ಲಿಸಿ, ಏನು ಎಂಬಂತೆ ತಿರುಗಿ ಅವಳತ್ತ ನೋಡಿದೆ.

''ಅಲ್ಲಿ ನೋಡಿ... ಯಾರದೋ ಲೆದರ್ ವ್ಯಾಲೆಟ್ ಬಿದ್ದಹಾಗಿದೆ!!'' ರಸ್ತೆ ಬದಿಯಲ್ಲಿ ಬಿದ್ದಿದ್ದ ಒಂದು ಹರಿದ ವ್ಯಾಲೆಟ್‌ನ ಕಡೆ ಬೆರಳು ತೋರಿಸುತ್ತಾ ಹೇಳಿದಳು.

''ಅದು ಹರಿದು ಹೋಗಿರೋ ವ್ಯಾಲೆಟ್ ಕಣೇ... ಬಿದ್ದಿರೋದಲ್ಲ, ಯಾರೋ ಎಸೆದಿರೋದು. ನಿನಗೇನು, ದಾರಿಯಲ್ಲಿ ಹೋಗುವಾಗ ಏನಾದರೂ ಹುಡುಕುವ ಚಟ? ಸುಮ್ಮನೇ ಮುಂದೆ ನೋಡ್ಕೊಂಡು ಹೋಗೋಕಾಗೋಲ್ವೇ?'' ಮಾಲಾಳನ್ನು ಗದರಿಸುತ್ತಾ, ಬೈಕನ್ನು ಜೋರಾಗಿ ಮನೆಯ ಕಡೆ ಓಡಿಸಿದೆ.


## ಮೋಹನಕುಮಾರ ಬಣಕಾರ

ಲೇಖಕರು ಮೂಲತಃ ರಾಣೇಬೆನ್ನೂರು ತಾಲ್ಲೂಕು ಜೋಯಿಸರಹರಳಹಳ್ಳಿ ಗ್ರಾಮದವರು. ಪ್ರಸ್ತುತ ಬೆಂಗಳೂರಿನಲ್ಲಿ ಖಾಸಗಿ ಕಂಪನಿಯೊಂದರಲ್ಲಿ ಎಂಜಿನಿಯರ್‌ಆಗಿ ಕೆಲಸ ಮಾಡುತ್ತಿದ್ದಾರೆ.